ಶ್ರೀ ಎಂ. ಎಸ್. ಕೃಷ್ಣನ್— ಕಾಲಿಂಗ್ ಅಟೆನ್‌ಷನ್‌ನ್ನು ಕೊಟ್ಟಿದ್ದಾರಂತೆ ಅವರಿಗೆ ಮಾತನಾಡಲಂ ನಾಳೆ ಅವಕಾಶ ಕೊಡಿ.

ಅಧ್ಯಕ್ಷರು — ಕಾಲಿಂಗ್ ಅಟೆನ್‌ಷನ್ ಕೊಟ್ಟರೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಹೇಳಿದ್ದೇನೆ. ಆದರೆ ಈಗ ಕೊಟ್ಟಿರುವ ೩೫ಳಿಗರಲ್ಲಿ ಮತ್ತೆ ಪ್ರಶ್ನೆ ಕೇಳಲು ಅವಕಾಶವಿಲ್ಲ. ನಾನು ನಿಮಗೆ ಎಷ್ಟು ಹೇಳಿದರೂ ಅದೆಲ್ಲಾ ಅರಣ್ಯರೋದನವಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್— ನಾಳೆ ಕಾಲಿಂಗ್ ಅಟೆನ್‌ಷನ್‌ಗೆ ಅವಕಾಶ ಕೊಟ್ಟರೆ ಸಾಕು.

ಶ್ರೀ ಪಂಪಾಪತಿ — ಮಾನ್ಯ ಅಧ್ಯಕ್ಷರೆ, ಕೇವಲ ಇದೊಂದೇ ಪ್ರಕರಣ ಅಲ್ಲ. ಇಂಥಾದ್ದು ಇನ್ನೂ ನಾಲ್ಕು ಕಡೆಯಲ್ಲಿ ಆಗಿದೆ. ಆದ್ದರಿಂದ ಚರ್ಚೆ ಮಾಡಲಂ ಅವಕಾಶ ಕೊಡಿ.

ಅಧ್ಯಕ್ಷರು— ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್— ತಾವು ಹೇಳುವುದಕ್ಕೆ ಒಪ್ಪಿಕೊಳ್ಳುತ್ತೇವೆ. ಈಗ ನಿಯಮಂ ೩೫ಳಿಗರಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ. ನಾಳೆಯಾದರೂ ಕಾಲಿಂಗ್ ಅಟೆನ್‌ಷನ್‌ಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು— ಆಗಲಿ ನೋಡೋಣ.

ಮುಧೋಳ ತಾಲ್ಲೂಕಿನ ದೋಕಾಪುರ ಗ್ರಾಮದ ಶಾಲಾ ಕಟ್ಟಡದ ದುರಸ್ತಿ

ಶ್ರೀ ಬಿ. ಜಿ. ಜಮಖಂಡಿ (ಮುಧೋಳ)— ಮಾನ್ಯ ಸಭಾಧ್ಯಕ್ಷರೆ, ಮುಧೋಳ ತಾಲ್ಲೂಕಿನ ದೋಕಾಪುರ ಗ್ರಾಮದಲ್ಲಿ ಸುಮಾರು ೫೦೦ಕ್ಕೂ ಮೇಲ್ಪಟ್ಟು ಪ್ರಾಥಮಿಕ ಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದ್ದಾರೆ. ವಿದ್ಯಾಭ್ಯಾಸವನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಅಲ್ಲದೆ ಒಂದೊಂದು ಕೋಣೆಯಲ್ಲಿ ೭೦–೮೦ ವಿದ್ಯಾರ್ಥಿಗಳು ಇದ್ದುದರಿಂದ ಈ ಪಾಠಗಳು ಚೆನ್ನಾಗಿ ನಡೆಯುತ್ತಿರಲಿಲ್ಲ. ಈಗ ಆ ಗ್ರಾಮದಲ್ಲಿ ಎನ್.ಆರ್.ಇ.ಪಿ. ಯೋಜನೆಯಡಿಯಲ್ಲಿ ೧೦ ಕೋಣೆಗಳನ್ನು ಕಟ್ಟಲು ಪ್ರಾರಂಭಿಸಿ ಸುಮಾರು ೬ ಕೋಣೆಗಳನ್ನು ಪೂರ್ತಿಗೊಳಿಸಲಾಯಿತು. ಆಮೇಲೆ ಸುಮಾರು ೭೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮಂತ್ರಿ ನಾಲ್ಕು ಕೋಣೆಗಳನ್ನು ಕಟ್ಟಲಾಯಿತು. ಶಾಲಾ ಕೊಠಡಿಗಳನ್ನು ಕಟ್ಟಿ ೧೫ ದಿನಗಳ ನಂತರ ದೊಡ್ಡದಾದ ಮಳೆ ಬಂದಾಗ ಹೊಸದಾಗಿ ಕಟ್ಟಿದ್ದ ನಾಲ್ಕು ಶಾಲಾ ಕೋಣೆಗಳ ಛಾವಣಿ ಹಾಗೂ ಗೋಡೆಗಳು ಬಿದ್ದು ಇನ್ನಿತರ ಕೋಣೆಗಳಿಗೆ ಧಕ್ಕೆಯುಂಟಾಗಿದೆ. ಹೀಗಾಗಿ ಅಲ್ಲಿಯಂ ಶಾಲಾ ಮಕ್ಕಳಿಗೆ ಕೋಣೆಗಳನ್ನು ಕಟ್ಟಿದ್ದರೂ ಸಹ ಶಾಲೆ ಇಲ್ಲದಂತಾಗಿದೆ. ಶಾಲೆಯ ಮಕ್ಕಳ ಪರಿಸ್ಥಿತಿಯಂತೂ ಗಂಭೀರ ಹಾಗೂ ಹೀನಾಯವಾಗಿದೆ. ಈ ದುರಂತಕ್ಕೆ ಕಾರಣರಾದ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ಆದಷ್ಟು ತೀವ್ರಗತಿಯಿಂದ ಶಾಲಾ ಕೊಠಡಿಗಳ ರಿಪೇರಿ ಆಗಬೇಕೆಂದು ನಾನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು)— ಮಾನ್ಯ ಅಧ್ಯಕ್ಷರೆ, ಈ ವಿಷಯ ಈಗ ನನ್ನ ಗಮನಕ್ಕೆ ಬಂದಿದೆ. ಈ ಕೋಣೆಗಳನ್ನು ಎನ್.ಆರ್.ಇ.ಪಿ.ಯಲ್ಲಿ ಕಟ್ಟಿದೆ. ಇತ್ತೀಚೆಗೆ ಮಳೆ ಬಂದಾಗ ಇದು ಬಿದ್ದು ಹೋಗಿದೆ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಆದೇಶ ನೀಡಿ ಈ ದುರಂತಕ್ಕೆ ಕಾರಣರಾದವರ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

೫ ಬಂಟ್ವಾಳ ತಾಲ್ಲೂಕಿನ ರಾಷ್ಟ್ರೀಕರಣವ ರಸ್ತೆಗಳಲ್ಲಿ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸುವುದು

ಶ್ರೀ ಬಿ.ಎ. ಉಮರಬ್ಬ (ವಿಟ್ಲ). —ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ್ ತಾಲ್ಲೂಕಿನ ಹಲವಾರು ರಸ್ತೆಗಳು ರಾಷ್ಟ್ರೀಕರಣವಾಗಿದ್ದು ಈ ರಸ್ತೆಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಸರ್ಕಾರಿ ಬಸ್‌ಗಳು ಓಡಾಟ ನಡೆಸುತ್ತಿವೆ. ಇದರಿಂದಾಗಿ ಸಾರ್ವಜನಿಕರಿಗೆ, ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಅಪಾರ ತೊಂದರೆಯಾಗುತ್ತಿದೆ. ಅಗತ್ಯವಿರುವ ಪ್ರಮಾಣದ ಬಸ್ಸುಗಳ ಓಡಾಟಗಳ